1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್. ಸಿ. 39/2021

ದಿನಾಂಕ ಃ 14.08.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ.ಆರ್.ವಿ ವಕೀಲರಿಂದ ಃ**

1) ಗಾಯಾಳು ಸ್ವಾಮಿ ರವರು ದಿಃ 30.09.2020 ರಂದು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದಾಗ ನಾನು ಅವರನ್ನು ಮೊದಲನೇ ಬಾರಿಗೆ ಪರಿಶೀಲಿಸಿದಾಗ ಸಮಯ ಮಧ್ಯಾಹ್ನ 3.20 ಅಥವಾ 3.25 ಗಂಟೆ ಆಗಿತ್ತು. ಗಾಯಾಳು ಸ್ವಾಮಿಯನ್ನು ಆಸ್ಪತ್ರೆಗೆ ಕರೆ ತಂದಿದ್ದಾಗ ತುರ್ತು ಚಿಕಿತ್ಸಾ ವಿಭಾಗದಲ್ಲಿ ಅವರನ್ನು ಬರಮಾಡಿಕೊಂಡಿದ್ದರು. ತುರ್ತು ಚಿಕಿತ್ಸಾ ವಿಭಾಗದಲ್ಲಿ, ಸದರಿ ಗಾಯಾಳು, ಯಾವ ಆಸ್ಪತ್ರೆಯಿಂದ ಬಂದಿದ್ದರು ಮತ್ತು ಯಾವ ದಾಖಲೆಯನ್ನು ಜೊತೆಯಲ್ಲಿ ತಂದಿದ್ದರು ಎನ್ನುವ ಮಾಹಿತಿಯನ್ನು ತುರ್ತು ಚಿಕಿತ್ಸಾ ವಿಭಾಗದ ರಿಜಿಸ್ಟರ್ ನಲ್ಲಿ ಬರೆಯುತ್ತಾರೆ ಎಂದರೆ ಸರಿ. ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ ಗಾಯಾಳು ಸ್ವಾಮಿ ಏನೇನು ಚಿಕಿತ್ಸೆಯನ್ನು ಕೊಟ್ಟಿದ್ದರು ಎನ್ನುವುದರ ಬಗ್ಗೆ ನಮ್ಮ ಆಸ್ಪತ್ರೆಯಲ್ಲಿ ನಮೂದು ಆಗಿದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ, ಗಾಯಾಳು ಸ್ವಾಮಿಗೆ ಪ್ರಜ್ಞೆ ಇತ್ತಾ, ಇಲ್ಲವಾ ಎನ್ನುವುದರ ಬಗ್ಗೆ ನಮೂದು ಆಗಿದೆ. ಗಾಯ, ಹೇಗೆ ಆಯಿತು, ಯಾವ ಉದ್ದೇಶಕ್ಕೆ ಆಯಿತು ಎನ್ನುವುದರ ಬಗ್ಗೆ ಸದರಿ ದಾಖಲೆಯಲ್ಲಿ ನಮೂದು ಆಗಿತ್ತು. ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ, ಗಾಯಾಳು ಸ್ವಾಮಿಗೆ, ಪರೀಕ್ಷೆ ಮಾಡಿ, ಮೇಲ್ಭಾಗದಲ್ಲಿ ಆಗಿದ್ದ ಗಾಯಗಳಿಗೆ ಮತ್ತು ರಕ್ತಗಾಯಗಳಿಗೆ ಪ್ರಥಮ ಚಿಕಿತ್ಸೆಯನ್ನು ಕೊಟ್ಟು ಆಮೇಲೆ ರೆಫರ್ ಮಾಡಿದ್ದರು ಎಂದರೆ ಸರಿ. ಹಾಗೂ ಏನೇನು ಗಾಯಗಳು ಆಗಿತ್ತು ಎನ್ನುವುದನ್ನು ಸಹ ನಮೂದಿಸಿ ಕಳುಹಿಸಿದ್ದರು ಎಂದರೆ ಸರಿ.

2) ನಮ್ಮ ಆಸ್ಪತ್ರೆಯಲ್ಲಿ, ಗಾಯಾಳು ಸ್ವಾಮಿಗೆ ಮೊದಲನೇ ಬಾರಿಗೆ ಚಿಕಿತ್ಸೆಯನ್ನು ನಾನು ಕೊಟ್ಟಿದ್ದೆನು. ಗಾಯಾಳು ಸ್ವಾಮಿಗೆ, ಸಂಬಂಧಿಕರು ಹಲ್ಲೆ ಮಾಡಿದ್ದರು ಎಂದು, ನಮ್ಮ ಆಸ್ಪತ್ರೆಯ ದಾಖಲೆಯಲ್ಲಿ ನಮೂದು ಮಾಡಿದ್ದಾರೆ, ಹಾಗೂ ಯಾರು ಯಾರು ಹಲ್ಲೆ ಮಾಡಿದ್ದರು ಎಂಬುವವರ ಹೆಸರನ್ನು ನಮ್ಮ ಆಸ್ಪತ್ರೆಯಲ್ಲಿ ಹೇಳಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಹಲ್ಲೆ ಆಗಿದ್ದ ಬಗ್ಗೆ ಗಾಯಾಳುವಿಗೆ ನಾನು ವಿಚಾರಿಸಿದೆನು. ಚಿಕ್ಕಪುಟ್ಟ (ಚಾಸಾ7) ರವರನ್ನು ಬಿಟ್ಟು, ಬೇರೆ ಯಾರು ಸಂಬಂಧಿಕರು ಸ್ವಾಮಿ ಜೊತೆ ಇದ್ದರು ಎನ್ನುವುದನ್ನು ನಾನು ನೋಡಲು ಹೋಗಲಿಲ್ಲ.

3) ನಿಪಿ.48 Police intimation letter ನಲ್ಲಿ, ''assault by a known person, near his residence'' ಅಂತ ಬರೆದಿದೆ ಎಂದರೆ ಸರಿ. ಗಾಯಾಳು ಸ್ವಾಮಿ, ನಮ್ಮ ಆಸ್ಪತ್ರೆಗೆ ಬಂದಿದ್ದಾಗ, ಮಂಡ್ಯದ ಮಿಮ್ಸು ಆಸ್ಪತ್ರೆಯಲ್ಲಿ ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಹಾಕಿದ್ದ ಬ್ಯಾಂಡೇಜ್ ಮೇಲೂ ಸಹ, ರಕ್ತ

ಬರುತ್ತಿತ್ತು. ಕತ್ತರಿಸಿದ ಗಾಯಕ್ಕೂ ಮತ್ತು ಜಜ್ಜಿದ ಗಾಯಕ್ಕೂ ವ್ಯತ್ಯಾಸ ಇದೆ ಎಂದರೆ ಸರಿ. Cut lacerated wound, ಹರಿತವಾದ ವಸ್ತುಗಳಿಂದ ಹೊಡೆದರೆ ಅಥವಾ ತಗುಲಿದಾಗ, ಆಗುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿಯು ಸಾಧ್ಯತೆ ಇದೆ ಎಂದು ಹೇಳುತ್ತಾರೆ ಹಾಗೂ ಸ್ವತಃ ಮುಂದುವರೆದು, ಗೋಡೆಗೆ ತಲೆ ಹೊಡೆದರೆ ಅಥವಾ ಭಾರವಾದ ವಸ್ತುಗಳು ಬಿದ್ದಾಗಲೂ ಸಹ Cut lacerated wound ಆಗುವ ಸಾಧ್ಯತೆ ಇರುತ್ತದೆ ಎಂದು ಹೇಳುತ್ತಾರೆ. ಬಲವಾಗಿ ಗಟ್ಟಿ ನೆಲದ ಮೇಲೆ ಅಥವಾ ಕಲ್ಲುಗಳ ಮೇಲೆ ಬಿದ್ದಾಗ ಜಜ್ಜಿದ ಗಾಯ ಆಗುತ್ತದೆ ಎಂದರೆ ಸರಿ. ಒಂದು ವಸ್ತುವಿನ ಮೇಲೆ ಒಬ್ಬ ವ್ಯಕ್ತಿ ಆಕಸ್ಮಿಕವಾಗಿ ಆಯ ತಪ್ಪಿ ಬಿದ್ದಾಗ ಅಥವಾ ತಳ್ಳಾಟದಿಂದ ಕಲ್ಲಿನ ಮೇಲೆ ಬಿದ್ದಾಗ, Cut lacerated wound ಹಾಗೂ ಇತರೆ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಮರ, ಕಲ್ಲು ಅಥವಾ ಇತರೆ ವಸ್ತುಗಳು, ತಲೆಯ ಮೆಲ್ಬಾಗದಲ್ಲಿ ಬಿದ್ದಾಗ, ಅದು ಮುಖದ ಮೇಲೆ ತಗುಲಿ, ಕೆಳಗೆ ಬೀಳುತ್ತದೆ ಎಂದರೆ ಸಾಕ್ಷಿಯು ಬೀಳುವ ಸಾಧ್ಯತೆ ಇರುತ್ತದೆ ಎಂದು ನುಡಿಯುತ್ತಾರೆ.

4) ದಿಃ30.09.2020 ರಂದು ನಮ್ಮ ಆಸ್ಪತ್ರೆಯಿಂದ ಪೊಲೀಸ್ intimation ನ್ನು, ತಕ್ಷಣವೇ ಕಳುಹಿಸಿದೆವು. ಅದೇ ದಿವಸ ಅಂದರೆ ದಿಃ 30.09.2020 ರಂದೇ ಪೊಲೀಸರು, ಗಾಯಾಳುವನ್ನು ವಿಚಾರಿಸುವುದಕ್ಕೆ ನಮ್ಮ ಆಸ್ಪತ್ರೆಗೆ ಬಂದಿದ್ದರು. ಪೊಲೀಸರು, ಪತ್ರದ ಮುಖೇನ ನಮ್ಮ ಆಸ್ಪತ್ರೆಗೆ, ಗಾಯಾಳುವಿಗೆ ಪ್ರಜ್ಞೆ ಇದೆಯಾ ಇಲ್ಲವಾ, ಹೇಳಿಕೆ ಕೊಡುವ ಸ್ತಿತಿಯಲ್ಲಿ ಇದ್ದಾರಾ, ಇಲ್ಲವಾ ಅಂತ ಕೇಳಿದ್ದರು. ಪೊಲೀಸರು ಕೊಟ್ಟಿದ್ದ ಸದರಿ ಮನವಿ ಪತ್ರದಲ್ಲಿ, ದಿಃ 06.10.2020 ಅಂತ ನಮೂದು ಇದೆ ಎಂದರೆ ಸರಿ. ದಿಃ06.10.2020 ರ ಒಳಗೆ, ಪೊಲೀಸರು, ಗಾಯಾಳುವಿನ ಹೇಳಿಕೆ ಕೊಡುವ ಸ್ತಿತಿಯ ಬಗ್ಗೆ ನಮ್ಮ ಆಸ್ಪತ್ರೆಗೆ ಮನವಿ ಪತ್ರವನ್ನು ಸಲ್ಲಿಸಿದ್ದರು. ಪೊಲೀಸರು, 06.10.2020 ರ ಒಳಗೆ ನಮ್ಮ ಆಸ್ಪತ್ರೆಗೆ ಮನವಿ ಪತ್ರವನ್ನು ಕೊಟ್ಟಿದ್ದರು ಎನ್ನುವುದಕ್ಕೆ ನಿಮ್ಮ ಬಳಿ ದಾಖಲೆ ಇದೆಯಾ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ಪೊಲೀಸರು, ಮನವಿ ಪತ್ರವನ್ನು ಆಸ್ಪತ್ರೆಗೆ ತಂದಿದ್ದಾಗ, ಅದರ ಮೇಲೆ, ಗಾಯಾಳುವಿನ ಆರೋಗ್ಯದ ಪರಿಸ್ತಿತಿಯ ಬಗ್ಗೆ ಬರೆಸಿಕೊಂಡು, ಅದನ್ನು ವಾಪಸ್ಸು ತೆಗೆದುಕೊಂಡಿದ್ದರು ಹಾಗೂ ಅದನ್ನು ನಮಗೆ ಕೊಟ್ಟಿರಲಿಲ್ಲ ಹಾಗೂ ಪೊಲೀಸರು ಈ ರೀತಿ ಬಂದು ಹೋಗಿರುವುದಕ್ಕೆ, ನಮ್ಮ ಆಸ್ಪತ್ರೆಯ ರೆಕಾರ್ಡಿನಲ್ಲಿ ನಮೂದು ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

5) ದಿಃ 30.09.2020 ರಂದು ನಮ್ಮ ಆಸ್ಪತ್ರೆಯಿಂದ ಕುಳಹಿಸಿದ್ದ ಪೊಲೀಸ್ intimation ಗೆ, ಪೊಲಿಸರು, ನಮ್ಮ ಆಸ್ಪತ್ರೆಗೆ, ನಿಪಿ.49 ರ ದಾಖಲೆಯ ಪ್ರಕಾರ ದಿಃ 06.10.2020 ರಂದು ಬಂದಿದ್ದರು ಎಂದರೆ ಸರಿ. ಪೊಲೀಸರು ಆಸ್ಪತ್ರೆಗೆ ಗಾಯಾಳು ಸ್ವಾಮಿಯ ಹೇಳಿಕೆಯನ್ನು ಮಾಡಿಕೊಳ್ಳಲು ಬಂದಿದ್ದಾಗ, ಗಾಯಾಳುವಿನ ಮನಸ್ತಿತಿಯ ಬಗ್ಗೆ ವರದಿ ಮಾಡಿದ್ದು ನಾನು. ಪೊಲೀಸರು, ಗಾಯಾಳು ಸ್ವಾಮಿಯು ಹೇಳಿಕೆ ಕೊಡುವ ಸ್ತಿತಿಯಲ್ಲಿ ಇದ್ದಾರಾ, ಇಲ್ಲವಾ ಅಂತ ಕೇಳಿದ್ದ ಬಗ್ಗೆ ದಾಖಲೆ, ನಮ್ಮ ಆಸ್ಪತ್ರೆಯಲ್ಲಿ ಇಲ್ಲ. ಸಾಕ್ಷಿಯು

ಮುಂದುವರೆದು ಸ್ವತಃ ಹೇಳುತ್ತಾರೆ, ಪೊಲೀಸರು, ತಂದಿದ್ದ ಮನವಿ ಪತ್ರದಲ್ಲಿ ಗಾಯಾಳು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದಾರಾ, ಇಲ್ಲವಾ ಎನ್ನುವುದನ್ನು ಬರೆಸಿಕೊಂಡು ಹೋಗಿದ್ದರು ಎಂದು. ಪೊಲೀಸರು, ಕಲ್ಲು, ದೊಣ್ಣೆಗಳನ್ನು ಆಸ್ಪತ್ರೆಗೆ ತಂದು ನನಗೆ ತೋರಿಸಿರಲಿಲ್ಲ., ನನ್ನ ಅಭಿಪ್ರಾಯವನ್ನು ಕೇಳಿದಾಗ. ಗಾಯಾಳು ಸ್ವಾಮಿ, ನಮ್ಮ ಆಸ್ಪತ್ರೆಗೆ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ವನ್ನು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಗಾಯಾಳುವನ್ನು ನಾನು ಎಲ್ಲಿಗೂ ರೆಫರ್ ಮಾಡಿರಲಿಲ್ಲ ಎಂದರೆ ಸರಿಯಲ್ಲ.ಗಾಯಾಳುವಿನ ಒತ್ತಾಯದ ಮೇರೆಗೆ, ತನಿಖಾಧಿಕಾರಿಗಳು ಹೇಳಿದಂತೆ ಸುಳ್ಳು ವರದಿಗಳನ್ನು ಮತ್ತು ಸುಳ್ಳು ವೈದ್ಯಕೀಯ ದಾಖಲಾತಿಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ತಿಳಿಸಿದಂತೆ ನಾನು ಅಂತಿಮ ಅಭಿಪ್ರಾಯವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಗಾಯಾಳು ಸ್ವಾಮಿ, ಈ ಹಿಂದೆ ನಮ್ಮ ಆಸ್ಪತೆಗೆ ಬಂದು ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದ ಪರಿಚಯದ ಮೇರೆಗೆ ನಾನು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ಅದಕ್ಕೆ ಪೂರಕವಾಗಿ ಸುಳ್ಳು ದಾಖಲಾತಿಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.